


ಗ್ರಾಮ ವಾಸ್ತವ್ಯಕ್ಕಾಗಿ ಸಾವಕ್ಕನ ಮನೆಗೆ ಮಂತ್ರಿಗಳು ಆಗಮಿಸಿದರು. ಆವರು ಬಂದದ್ದರಿಂದ ಆಕೆಯ ಬದುಕಿನಲ್ಲಿ ಆದ ಬದಲಾವಣೆಗಳೇನು?

"ಬೇಚಿಗವ್ವಾ ಏನ್ ಮಾಡಾಕತ್ತಿಯಬೇ" ಎಂದು ಮುಂಚಿ ಬಾಗಿಲಲ್ಲಿ ನಿಂತು ಪಕ್ಕೀರ ಕೂಗು ಹಾಕಿದಾಗ ಸಾವಕ್ಕ ಹಿತ್ತಲಿನ ಗೋಡೆಗೆ ಕುಳ್ಳು ಬಡಿಯುತ್ತಿದ್ದಳು. ಎರಡೂ ಕೈಗಳಿಗೂ ಸಗಣಿ ಮೆತ್ತಿದ್ದರಿಂದ ತಲೆಯ ಮೇಲಿಂದ ಜಾರಿದ್ದ ಸೆರಗನ್ನು ಹೊದ್ದುಕೊಳ್ಳಲು ಹರಸಾಹಸ ಪಡುತ್ತಿದ್ದಳು. ಹಿತ್ತಲ ಬಾಗಿಲಿನಿಂದ ತನ್ನ ತಲೆಯನ್ನಷ್ಟೇ ಒಳ ಹಾಕಿ, "ಯಾರಲಾ ಅದ? ನೆದರ ಕಡಿಮಿ ಆಗಿ ಗುರತ ಹತ್ತವಾಲ್ದ. ಇತ್ತಾ ಕಡೆ ಹಿತ್ತಲಕ್ಕ ಬಾರೋ ತಮ್ಮಾ" ಎಂದಳು. ಎರಡು ಅಂಕಣಗಳನ್ನು ದಾಟಿ ಹಿತ್ತಲಿಗೆ ಬಂದ ಪಕ್ಕೀರ, "ಮುದಕಿ ನಿನ್ನ ನಸೀಬ್ ತೆರೀತ್ ಅಲ್ಲಬೇ. ಇನ್ ನಿನ್ನ ಹಿಡದವರಾ